ಶ್ರೀ ಎಸ್. ಆರ್. ಕಂಠಿ.—ಆಗಲೇ ಉತ್ತರಹೇಳಿದ್ದೇನೆ, ಸರ್ಕಾರದವರು ಟೈಪ್ ಡಿಸ್ಟ್ರಿನ್ನು ಟೀಪ್ ಡಿಸ್ಟ್ರಿನ್ನಾಗಿ ಮಾಡುವುದಕ್ಕೆ ಸಾಧ್ಯವೇ ಎಂದು ವಿಚಾರ ಮಾಡುತ್ತಾ ಇದ್ದಾರೆ.

ಒಬ್ಬ ಮಾನ್ಯಸದಸ್ಯರು.—ಹಳ್ಳಿಗಳಲ್ಲಿ ಶಾಲಾಕಟ್ಟಡಗಳಿಗೆ ಪ್ರತಿಯೊಂದಕ್ಕೂ ಕಂಟ್ರಿಬ್ಯೂಷ್ಷ ಕೊಡಬೇಕೆಂಬ ಕಾನೂನನ್ನು ಜಾರಿಗೆ ತಂದಿದೆ ಆ ಕಾನೂನು ಹರಿಜನ ಗಿರಿಜನರಿಗೂ ಅನ್ವಯಿಸುತ್ತದೆಯೇ?

ಶ್ರೀ ಎಸ್. ಆರ್. ಕಂಠಿ.—ಜನಗಳು ಅಂದರೆ ಹರಿಜನರು, ಗಿರಿಜನರು ಎಲ್ಲಾ ಸೇರುತ್ತಾರೆ. ಹರಿಜನರಿಗೇ ಶಾಲೆಗಳು ಬೇರೆಯಾಗಿ ಆಗುವುದಿಲ್ಲ. ಎಲ್ಲಾ ಶಾಲೆಗಳನ್ನು ಜನರಲ್ ಶಾಲೆಗಳಾಗಿ ಮಾಡುತ್ತೇವೆ. ಹರಿಜನ ಗಿರಿಜನ ಶಾಲೆಗಳನ್ನು ಜನರಲ್ ಶಾಲೆಗಳಾಗಿ ಮಾಡುವುದು ಸರ್ಕಾರದ ಪಾಲಿಸಿಯಾಗಿದೆ.

Reducing of Land Revenue in Kolar District.

*Q.—413. **Sri S. V. RAME GOWDA** (Malur).—

Will the Government be pleased to state:—

(*a*) whether it has come to their notice that in old Mysore area, Kolar District is the only maidan area having no irrigation facilities whatsoever;

(*b*) whether it is a fact that the land revenue of the dry and wet land and gardens is higher in the above district in spite of lack of irrigation facilities there;

(*c*) if so, whether they will reduce the land revenue of all the categories of land in Kolar District?

A.—**Sri M. V. KRISHNAPPA** (Minister for Revenue).—

(*a*) No.

(*b*) & (*c*) Does not arise.

ಶ್ರೀ ಎಸ್. ವಿ. ರಾಮೇಗೌಡ.—(ಅ) ಮತ್ತು (ಇ) ಪ್ರಶ್ನೆಗಳು ಉದ್ಭವಿಸುವುದಿಲ್ಲವೆಂದು ಹೇಳಿದ್ದೀರಿ. ಸುಮಾರು 20 ವರ್ಷಗಳಲಾಗಾಯಿತು ಕೋಲಾರ ಡಿಸ್ಟ್ರಿಕ್ಟಿನಲ್ಲಿ ಕಂದಾಯ ಜಾಸ್ತಿ ಇದೆಯೆಂದು ಹಿಂದಿನ ಅಸೆಂಬ್ಲಿಗಳಲ್ಲಿ ಹೇಳಿದ್ದಾರೆ. ಅದನ್ನು ಸರ್ಕಾರದವರು ಈಗಲಾದರೂ ಕಡಮೆ ಮಾಡುತ್ತಾರೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಕಂದಾಯ ಕಡಮೆ ಮಾಡಬೇಕೆಂದು ಹಿಂದೆ ಕೂಗಾಡಿದರೂ ನಾವೇ. ಆಗಿನ ದಿವಾ ಸರ್ಕಾರ ಒಂದು ಆಣೆ ಕಡಮೆ ಮಾಡಿತು. ಈಗ ದಿನೇ ದಿನೇ ಬೆಳೆಯುತ್ತಿರುವ ಆರ್ಥಿಕ ಪರಿಸ್ಥಿತಿಯಲ್ಲಿ ಕಂದಾಯ ಕಡಮೆ ಮಾಡುವ ಮಾತು ಬರುವುದಿಲ್ಲ. ಏನಿದ್ದರೂ ಜಾಸ್ತಿ ಮಾಡುವುದೇ ಇರುವುದು.

ಶ್ರೀ ಕೆ. ಲಕ್ಕಪ್ಪ.—ದಿವಾ ಸರ್ಕಾರ ಒಂದು ಆಣೆ ಕಡಮೆ ಮಾಡಿತು. ನಿಮ್ಮ ಸರ್ಕಾರ ಎಷ್ಟು ಕಡಮೆ ಮಾಡುತ್ತದೆ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾನು ಪುನಃ ಹೇಳಬೇಕಾಗಿದೆ. ಈಗ ದಿನೇ ದಿನೇ ಬೆಳೆಯುತ್ತಿರುವ ಆರ್ಥಿಕ ಪರಿಸ್ಥಿತಿಯಲ್ಲಿ ಕಂದಾಯ ಕಡಮೆ ಮಾಡುವ ಪ್ರಶ್ನೆಯೇ ಬರುವುದಿಲ್ಲ. ಬೇರೆ ಜಿಲ್ಲೆಗಳಲ್ಲಿ ಎಲ್ಲ ಕಂದಾಯ ಕಡಮೆ ಇದೆಯೋ ಅವುಗಳನ್ನು ಈ ಮಟ್ಟಕ್ಕೆ ತರಬೇಕು, ಅಷ್ಟೇ.

ಶ್ರೀ ಪಿ. ವೆಂಕಟಗಿರಿಯಪ್ಪ.—ಕಂದಾಯ ವಿಧಿಸಿರುವ ರೀತಿ ಒಂದು ನ್ಯಾಷನಲ್ ಬೇಸಿಸ್ ಮೇಲೆ ಇಲ್ಲ. ಕೆಲವು ಕಡೆಗಳಲ್ಲಿ ಬಹಳ ಕಡಮೆ ಇದೆ. ಕೆಲವು ಜಿಲ್ಲೆಗಳಲ್ಲಿ ಬೇರೆ ಕಡೆಗಿಂತ ಜಾಸ್ತಿ ಇದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಹಳೇ ಮೈಸೂರು ಜಿಲ್ಲೆಯನ್ನು ತೆಗೆದುಕೊಂಡರೆ ಕೋಲಾರ ಜಿಲ್ಲೆಯಲ್ಲಿ ಜಾಸ್ತಿ ಇಷ್ಟು. ಈಗ ಹೊಸ ಮೈಸೂರನ್ನು ತೆಗೆದುಕೊಂಡರೆ, ಕೋಲಾರ ಜಿಲ್ಲೆಗಿಂತ ಜಾಸ್ತಿ ಕಂದಾಯ ಇರುವ ಜಿಲ್ಲೆಗಳು ಬಂದಿವೆ. ಈ ವಿಷಯದಲ್ಲಿ ಒಂದು ಯೂನಿಫಾರಂ ಲೆಜಿಸ್ಲೇಷ್ಷ ತರಬೇಕೆಂದು ಸರ್ಕಾರ ಯೋಚನೆ ಮಾಡಿದೆ. ಅನೇಕ ಜಿಲ್ಲೆಗಳಲ್ಲಿ ಸೆಟ್ಲಮೆಂಟಿ ಫಿಕ್ ಬೇಸಿಸ್, ಫರ್ಟಿಲಿಟಿ, ಎನ್ ವಿರನ್ ಮೆಂಟಲ್ ಕಂಡಿಷನ್ಸ್ ಮನ್ನಣೆಗೆ ತೆಗೆದುಕೊಂಡು ಲ್ಯಾಂಡ್ ರೆವಿನ್ಯೂ ಸೆಟಲ್ ಮಾಡಲು ಒಂದು ಲ್ಯಾಂಡ್ ಟೀಮ್ ಕೆಲಸ ಮಾಡುತ್ತಿದೆ.

ಶ್ರೀ ಜಿ. ವೆಂಕಟೇಗೌಡ.—ಈಗ ಕಡಮೆ ಮಾಡದೆ ಇದ್ದರೂ, ನರ್ ಚಾರ್ಜ್ ಲ್ಯಾಂಡ್ ರೆವಿನ್ಯೂ ತಂದ ನಂತರ ಕಡಮೆ ಮಾಡಲಿಕ್ಕೆ ಸಾಧ್ಯವೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

Sri D. M. SIDDAIAH.—Sir, Questions Nos. 515 and 521 may be taken up together.

Mr. SPEAKER.—I have no objection.

Amount allocated for Repairing the Anmod-Londa Road.

*Q.—515. **Sri D. M. SIDDAIAH** (Biligere).—

Will the Government be pleased to state:—

(*a*) whether they have allocated or agreed to allocate any sum of money for repairing the Anmod-Londa Road which is a part of the high road from Panjim to Belgaum;

(*b*) if so, the stage at which the matter stands at present?

A.—**Sri VEERENDRA PATIL** (Minister for Public Works).—

(*a*) This question is under examination.

(*b*) Does not arise.